"ಮಧುರ ಮಕ್ಕಳೇ - ಯಾವ ಖುಷಿಯು ನಿಮಗೆ ಪ್ರಾಪ್ತಿಯಾಗಿದೆ ಅದನ್ನು ಎಲ್ಲರಿಗೂ ಕೊಡಬೇಕು, ನೀವು ಸುಖ-ಶಾಂತಿಯನ್ನು ಹಂಚುವಂತಹ ವ್ಯಾಪಾರ ಮಾಡಬೇಕು"

ಪ್ರಶ್ನೆ: ನೀವು ಮಕ್ಕಳಿಗೆ ಈ ಬೇಹದ್ದಿನ ನಾಟಕದ ಪ್ರತಿಯೊಂದು ದೃಶ್ಯ ಬಹಳ ಇಷ್ಟವಾಗಿದೆ - ಏಕೆ?

ಉತ್ತರ: ಏಕೆಂದರೆ ಸ್ವಯಂ ಈ ನಾಟಕದ ರಚಯಿತನಿಗೆ ಈ ನಾಟಕ ಇಷ್ಟವಾಗಿದೆ. ಯಾವಾಗ ನಾಟಕದ ರಚನೆಕಾರನಿಗೆ ಇಷ್ಟವಿದೆ ಅಂದಾಗ ಮಕ್ಕಳಿಗೂ ಅವಶ್ಯವಾಗಿ ಇಷ್ಟವಿರುತ್ತದೆ. ನೀವು ಯಾವ ಮಾತಿನಲ್ಲಿಯೂ ಬೇಸರವಾಗುವುದಿಲ್ಲ. ಈ ಸುಖ-ದುಃಖದ ನಾಟಕ ಬಹಳ ಸುಂದರವಾಗಿ ಮಾಡಲ್ಪಟ್ಟಿದೆ ಎಂದು ನೀವು ತಿಳಿದುಕೊಂಡಿದ್ದೀರಿ. ಈ ನಾಟಕದಲ್ಲಿ ಸುಖ-ದುಃಖದ ಆಟ ನಡೆಯುತ್ತಿರುತ್ತದೆ. ಇದನ್ನು ಅಶುಭವೆಂದು ಹೇಳಲಾಗುವುದಿಲ್ಲ. ದಿನವೂ ಚೆನ್ನಾಗಿದೆ ಅಂದಾಗ ರಾತ್ರಿಯೂ ಚೆನ್ನಾಗಿದೆ...... ಈ ನಾಟಕದಲ್ಲಿ ಯಾವ ಪಾತ್ರ ಸಿಕ್ಕಿದೆ ಆ ಪಾತ್ರವನ್ನು ಖುಷಿಯಿಂದ ಮಾಡುವವರು ಬಹಳ ಮಜದಲ್ಲಿರುತ್ತಾರೆ. ಈ ಬೇಹದ್ದಿನ ನಾಟಕದ ಜ್ಞಾನವನ್ನು ಸ್ಮರಣೆ ಮಾಡುವವರು ಸದಾ ಹರ್ಷಿತವಾಗಿರುತ್ತಾರೆ, ಅವರ ಬುದ್ಧಿ ಸದಾ ಸಂಪನ್ನವಾಗಿರುತ್ತದೆ.

ಗೀತೆ: ನಮ್ಮ ತೀರ್ಥ ಭಿನ್ನವಾಗಿದೆ........

ಓಂ ಶಾಂತಿ. ವಾಸ್ತವದಲ್ಲಿ ಶಾಲೆಯಲ್ಲಿ ಯಾವುದೇ ಹಾಡನ್ನು ಹಾಡುವುದಿಲ್ಲ. ಹಾಗೆಯೇ ಇದು ಪಾಠಶಾಲೆಯಾಗಿದೆ, ಇಲ್ಲಿ ಹಾಡನ್ನು ಏಕೆ ಹಾಡುತ್ತಾರೆ? ಸತ್ಯಯುಗದಲ್ಲಂತೂ ಈ ಹಾಡನ್ನು ಹಾಡುವುದಿಲ್ಲ. ಈಗ ನೀವು ಸಂಗಮಯುಗದಲ್ಲಿ ಕುಳಿತಿದ್ದೀರಿ. ಆದುದರಿಂದ ನೀವು ಭಕ್ತಿ ಹಾಗೂ ಹಾಡು ಮೊದಲಾದವುಗಳನ್ನು ತೆಗೆದುಕೊಂಡು ಅವುಗಳ ಅರ್ಥವನ್ನು ತಿಳಿಸುತ್ತೀರಿ. ಮನುಷ್ಯರಂತೂ ಅರ್ಥವನ್ನು ತಿಳಿದುಕೊಂಡಿಲ್ಲ. ನಾವೀಗ ಇಲ್ಲಿಯೂ (ಭಕ್ತಿಯಲ್ಲಿ) ಇಲ್ಲ, ಅಲ್ಲಿಯೂ (ಸ್ವರ್ಗದಲ್ಲಿ) ಇಲ್ಲ. ಮಧ್ಯದಲ್ಲಿ ಕುಳಿತಿದ್ದೇವೆ. ಆದುದರಿಂದ ಸ್ವಲ್ಪ ಇವುಗಳ ಆಧಾರವನ್ನೂ ತೆಗೆದುಕೊಳ್ಳುತ್ತೇವೆ. ಮಕ್ಕಳಿಗೆ ಜ್ಞಾನ ಹಾಗೂ ಭಕ್ತಿಯ ರಹಸ್ಯವನ್ನು ತಿಳಿಸಲಾಗಿದೆ. ಈ ಸಮಯದಲ್ಲಿ ನೀವು ಭವಿಷ್ಯಕ್ಕೋಸ್ಕರ ಜ್ಞಾನವನ್ನು ಕೇಳುತ್ತಿದ್ದೀರಿ. ಯಾವುದೇ ಮನುಷ್ಯರು ಭವಿಷ್ಯದ ಪ್ರಾಲಬ್ಧಕ್ಕಾಗಿ ಮಾಡುವುದಿಲ್ಲ. ನೀವು ಭವಿಷ್ಯದ ಹೊಸ ಪ್ರಪಂಚದ ಸಲುವಾಗಿ ಪುರುಷಾರ್ಥ ಮಾಡುತ್ತೀರಿ. ಮನುಷ್ಯರು ಮುಂದಿನ ಜನ್ಮಕ್ಕಾಗಿ ದಾನ-ಪುಣ್ಯ ಮೊದಲಾದವುಗಳನ್ನು ಮಾಡುತ್ತಾರೆ. ಅದು ಭಕ್ತಿಯಾಗಿದೆ, ಇದು ಜ್ಞಾನವಾಗಿದೆ, ಕೆಲವರು ಜ್ಞಾನ, ಭಕ್ತಿ ಹಾಗೂ ವೈರಾಗ್ಯವೆಂದು ಹೇಳುತ್ತಾರೆ. ಸನ್ಯಾಸಿಗಳ ವೈರಾಗ್ಯವು ಹದ್ದಿನ ವೈರಾಗ್ಯವಾಗಿದೆ, ನಿಮ್ಮದು ಬೇಹದ್ದಿನ ವೈರಾಗ್ಯವಾಗಿದೆ. ಅವರು ಮನೆ-ಮಠದೊಂದಿಗೆ ವೈರಾಗ್ಯ ತರಿಸುತ್ತಾರೆ. ಪ್ರಪಂಚದೊಂದಿಗೆ ವೈರಾಗ್ಯ ತರಿಸುವುದಿಲ್ಲ ಏಕೆಂದರೆ ಅವರು ಇದನ್ನು ತಮೋಪ್ರಧಾನ ನಿಸ್ಸಾರ ಪ್ರಪಂಚವೆಂದು, ಈ ಪ್ರಪಂಚವು ವಿನಾಶವಾಗಲಿದೆಯೆಂದು ತಿಳಿದುಕೊಂಡಿಲ್ಲ ಏಕೆಂದರೆ ಕಲ್ಪದ ಆಯಸ್ಸನ್ನು ದೀರ್ಘವಾಗಿ ತೋರಿಸಿದ್ದಾರೆ. ಈಗ ತಂದೆಯು ಕುಳಿತು ಎಲ್ಲಾ ಮಾತುಗಳನ್ನು ತಿಳಿಸುತ್ತಿದ್ದಾರೆ ಹಾಗೂ ನಿಮ್ಮ ಬುದ್ಧಿಯಿಂದಲೂ ಸಹ ಈ ಎಲ್ಲಾ ಮಾತುಗಳು ಸರಿಯೆಂದು ತಿಳಿದುಕೊಂಡಿದ್ದೀರಿ. ಪವಿತ್ರತೆ ಮುಖ್ಯವಾಗಿದೆ ಆದ್ದರಿಂದ ಅವರು ಮನೆ-ಮಠವನ್ನು ಬಿಡುತ್ತಾರೆ ಆದರೆ ನೀವು ಇಡೀ ಹಳೆಯ ಪ್ರಪಂಚವನ್ನು ಬುದ್ಧಿಯಿಂದ ಮರೆಯುತ್ತೀರಿ. ಪವಿತ್ರ ಪ್ರಪಂಚಕ್ಕೆ ಹೋಗುವ ಸಲುವಾಗ ಪವಿತ್ರರಾಗುತ್ತಿದ್ದೀರಿ. ಇದು ನಿಮ್ಮ ಬುದ್ಧಿಯ ಯಾತ್ರೆಯಾಗಿದೆ. ನೀವು ಕರ್ಮೇಂದ್ರಿಯಗಳಿಂದ ಎಲ್ಲಿಗೂ ಹೋಗುವ ಆವಶ್ಯಕತೆಯಿಲ್ಲ, ನೀವು ಶಾರೀರಿಕವಾಗಿ ಏನೂ ಮಾಡುವುದಿಲ್ಲ. ಈ ಯಾತ್ರೆಯಿಂದ ನಾವು ಆತ್ಮಿಕ ತಂದೆಯ ಬಳಿ ಹೋಗುತ್ತೇವೆ. ಅವರ ಶಾರೀರಿಕ ಯಾತ್ರೆಗಳು ಬಹಳಷ್ಟಿವೆ. ಒಮ್ಮೊಮ್ಮೆ ಒಂದೊಂದು ಕಡೆ ಹೋಗುತ್ತಿರುತ್ತಾರೆ ಆದರೆ ನಿಮ್ಮ ಬುದ್ಧಿ ಒಂದೇ ಕಡೆ ಇರುತ್ತದೆ. ಇದು ನಿಮ್ಮ ಅವ್ಯಭಿಚಾರಿ ಭಕ್ತಿ ಎಂದು ಹೇಳಬಹುದು. ನೀವು ಒಬ್ಬರನ್ನೇ ನೆನಪು ಮಾಡುತ್ತೀರಿ, ಅವರೆಲ್ಲರ ಭಕ್ತಿ ವ್ಯಭಿಚಾರಿಯಾಗಿದೆ ಏಕೆಂದರೆ ಅವರು ಅನೇಕರನ್ನು ನೆನಪು ಮಾಡುತ್ತಾರೆ. ನಿಮ್ಮದು ಅವ್ಯಭಿಚಾರಿ ಆತ್ಮಿಕ ಯಾತ್ರೆಯಾಗಿದೆ. ಈ ಯಾತ್ರೆಯಲ್ಲಿ ನಾವು ನಮ್ಮ ಮನೆಗೆ ಹಿಂತಿರುಗಿ ಹೋಗುತ್ತಿದ್ದೇವೆ. ಅವರು ನಿರ್ವಾಣ ಧಾಮವನ್ನು ಮನೆ ಎಂದು ತಿಳಿದುಕೊಳ್ಳುವುದಿಲ್ಲ ಏಕೆಂದರೆ ಅವರು ಪಾರನಿರ್ವಾಣವಾದರೆಂದು ಹೇಳುತ್ತಾರೆ. ಅಲ್ಲಿ ನಾವು ಆತ್ಮಗಳು ತಂದೆಯ ಜೊತೆ ಇರುತ್ತೇವೆಂದು ನೀವು ತಿಳಿದುಕೊಂಡಿದ್ದೀರಿ. ಈಗ ತಂದೆಯು ನಮ್ಮನ್ನು ಕರೆದೊಯ್ಯಲು ಬಂದಿದ್ದಾರೆ. ಅವರು ನಾವೆಲ್ಲರೂ ಈಶ್ವರನ ರೂಪವೆಂದು ತಿಳಿದುಕೊಳ್ಳುತ್ತಾರೆ. ಎಷ್ಟೊಂದು ಶಾಸ್ತ್ರಗಳನ್ನು ಓದುತ್ತಾರೆ ಆದರೆ ಸತ್ಯಯುಗದಲ್ಲಿ ನಿಮಗೆ ಏನೂ ಕಲಿಸಿ ಕೊಡುವುದಿಲ್ಲ. ನಿಮ್ಮನ್ನು ಈ ಎಲ್ಲಾ ಕರ್ಮ ಕಾಂಡಗಳಿಂದ ಸನ್ಯಾಸ ಮಾಡಿಸುತ್ತಾರೆ. ಇದೆಲ್ಲಾ ಭಕ್ತಿಯ ಕರ್ಮ ಕಾಂಡವಾಗಿದೆ. ಹೇಗೆ ಪ್ರಭುವಿನ ಗತಿ-ಮತಿ ಭಿನ್ನವಾಗಿದೆ ಹಾಗೆಯೇ ತಂದೆಯು ಬಂದು ಮೊಟ್ಟ ಮೊದಲು ನೀವು ಯಾರು ಎನ್ನುವುದನ್ನು ಕಲಿಸಿ ಕೊಡುತ್ತಾರೆ. ತಂದೆ ಸ್ವಯಂ ದಲ್ಲಾಳಿಯಾಗಿ ಬಂದಿದ್ದಾರೆ. ಭಗವಂತನನ್ನು ಕುರಿತು ಈ ರೀತಿ ಮಹಿಮೆ ಮಾಡುತ್ತಾರೆ ಆದರೆ ಏನನ್ನೂ ತಿಳಿದುಕೊಂಡಿಲ್ಲ. ನಿಮಗೆ ಭಕ್ತಿಯೊಂದಿಗೆ ತಿರಸ್ಕಾರವಂತೂ ಇಲ್ಲ. ನಾಟಕವು ಈ ರೀತಿ ಮಾಡಲ್ಪಟ್ಟಿರುವ ಕಾರಣ ಯಾರೊಂದಿಗೂ ತಿರಸ್ಕಾರದ ಭಾವನೆಯಿರುವುದಿಲ್ಲ. ಈ ಹಳೆಯ ಅಶುದ್ಧ ಜಗತ್ತನ್ನು ಬಿಟ್ಟು ಮನೆಗೆ ಹಿಂತಿರುಗಬೇಕೆಂದು ಅಗತ್ಯವಾಗಿ ತಿಳಿಸುತ್ತಾರೆ. ಭಕ್ತಿ ಮಾಡುವಾಗ ಭಕ್ತಿಯ ಜೊತೆ ಪ್ರೀತಿಯಿತ್ತು. ಹಾಡು

ಮೊದಲಾದವುಗಳನ್ನು ಕೇಳುವಾಗ ಮಜಾ ಅನಿಸುತ್ತಿತ್ತು. ಈಗ ಅದು ಯಾವ ಕೆಲಸಕ್ಕೆ ಬರುವುದಿಲ್ಲವೆಂದು ತಿಳಿದುಕೊಂಡಿದ್ದೀರಿ. ಕೇಳಲು ಯಾವುದೇ ಅಭ್ಯಂತರವೇನೂ ಇಲ್ಲ ಆದರೆ ಅದೂ ಸಹ ಭಕ್ತಿಯ ನಟನೆ ಎಂದು ತಿಳಿದುಕೊಂಡಿದ್ದೀರಿ. ಈಗ ನಮ್ಮ ಬುದ್ಧಿಯೋಗ ಅದೆಲ್ಲದರಿಂದ ದೂರವಾಗಿ ಜ್ಞಾನದ ಜೊತೆ ಜೋಡಣೆಯಾಗಿದೆ. ಈಗ ನೀವು ಜ್ಞಾನ ಹಾಗೂ ಭಕ್ತಿ ಎರಡನ್ನೂ ತಿಳಿದುಕೊಂಡಿದ್ದೀರಿ. ಎಲ್ಲಿಯವರೆಗೆ ಮನುಷ್ಯನಿಗೆ ಜ್ಞಾನ ಸಿಗುವುದಿಲ್ಲ ಅಲ್ಲಿಯವರೆಗೂ ಭಕ್ತಿ ಬಹಳ ಚೆನ್ನಾಗಿದೆ ಎಂದು ತಿಳಿದುಕೊಳ್ಳುತ್ತಾನೆ. ನಾವು ಜನ್ಮ-ಜನ್ಮಾಂತರದಿಂದ ಭಕ್ತಿ ಮಾಡುತ್ತಾ ಬಂದಿದ್ದೇವೆ. ಆದುದರಿಂದ ಭಕ್ತಿಯ ಜೊತೆ ಸ್ನೇಹ ಬೆಳೆದು ಬಿಟ್ಟಿದೆ. ಈ ಸುಖ-ದುಃಖ, ಸೋಲು-ಗೆಲುವಿನಿಂದ ಮಾಡಲ್ಪಟ್ಟ ನಾಟಕವೆಂದು ಈಗ ನಮ್ಮ ಬುದ್ಧಿಯಲ್ಲಿದೆ ಆದುದರಿಂದ ರಚಯಿತ ಹಾಗೂ ರಚನೆಯ ಜ್ಞಾನ ಪಡೆದು ತಂದೆಯಿಂದ ಆಸ್ತಿಯನ್ನೇಕೆ ಪಡೆದುಕೊಳ್ಳಬಾರದು ಎಂದು ದಯೆ ಬರುತ್ತದೆ. ತಮಗೆ ಪ್ರಾಪ್ತಿಯಾಗಿರುವ ಖುಷಿಯನ್ನು ಅನ್ಯರಿಗೂ ಕೊಡಬೇಕು. ಸಿಂಧಿ ಜನತೆಯಲ್ಲಿ (ವಿದೇಶಕ್ಕೆ ಹೋಗುವ ಸಿಂಧಿಗಳು) ಯಾವುದಾದರೂ ಸ್ಥಾನದಲ್ಲಿ ಉತ್ತಮ ವ್ಯಾಪಾರವಾಗುವುದನ್ನು ನೋಡಿದಾಗ ತಮ್ಮ ಮಿತ್ರ-ಸಂಬಂಧಿಗಳಿಗೂ ಸಹ ಅಂತಹ ಸ್ಥಾನದಲ್ಲಿ ಹೋಗಿ ವ್ಯಾಪಾರ ಮಾಡಲು ಸಲಹೆಯನ್ನು ಕೊಡುತ್ತಾರೆ.

ರಾವಣ ರಾಜ್ಯದಲ್ಲಿ ದುಃಖವೇ ದುಃಖವಿದೆ ಎಂದು ನೀವು ತಿಳಿದುಕೊಂಡಿದ್ದೀರಿ. ಈ ಜ್ಞಾನ ಎಂತಹ ವಸ್ತುವಾಗಿದೆ ಎಂದು ಮನುಷ್ಯರಿಗೆ ಗೊತ್ತಿಲ್ಲ. ಜ್ಞಾನದಿಂದ ಸ್ವರಾಜ್ಯ ಪ್ರಾಪ್ತಿಯಾಗುತ್ತದೆ ಎಂದು ಸಾಧು ಸಂತರೂ ಸಹ ತಿಳಿದುಕೊಂಡಿಲ್ಲ. ಆದುದರಿಂದ ಈ ಜ್ಞಾನದಿಂದ ಏನು ಪ್ರಾಪ್ತಿಯಾಗುತ್ತದೆ ಎಂದು ಕೇಳುತ್ತಾರೆ ಏಕೆಂದರೆ ಅವಿನಾಶಿ ಸುಖ-ಶಾಂತಿ ಪ್ರಾಪ್ತಿಯಾಗುತ್ತದೆ ಎಂದು ಬೋರ್ಡಿನಲ್ಲಿ ಬರೆಯಲಾಗುತ್ತದೆ. ಯಾರಿಗಾದರೂ ಸುಖ-ಶಾಂತಿಯ ವ್ಯಾಪಾರ ಸಿಕ್ಕಿ ಬಿಟ್ಟರೆ ಅದರಲ್ಲಿಯೇ ತೊಡಗಿ ಬಿಡುತ್ತಾರೆ. ಭೌತಿಕ ಸೇವೆಯನ್ನು ಸ್ವಲ್ಪ ಸಮಯ ಮಾಡಬೇಕಾಗುತ್ತದೆ. ಸತ್ಸಂಗದ ಸಮಯ ಬೆಳಗ್ಗೆ ಹಾಗೂ ಸಾಯಂಕಾಲ ಇರುತ್ತದೆ. ಮಾತೆಯರಿಗೆ ಮನೆ, ಬಂಧನವಿರುವ ಕಾರಣ ಬಿಡುವಿನ ವೇಳೆಯಲ್ಲಿ ಇಡಲಾಗುತ್ತದೆ. ಮುಂಜಾನೆಯ ಸಮಯ ಎಲ್ಲದಕ್ಕಿಂತಲೂ ಉತ್ತಮವಾಗಿದೆ. ಆಗ ಮನಸ್ಸು ಉಲ್ಲಾಸದಲ್ಲಿರುತ್ತದೆ. ಏನನ್ನು ಕೇಳುತ್ತೀರಿ ಅದನ್ನು ಧಾರಣೆ ಮಾಡಿ ಮನನ ಮಾಡಬೇಕು. ನಿರಾಕಾರ ಪರಮಾತ್ಮನೂ ಸಹ ಓದಿಸಲು ಬರುತ್ತಾರೆಂದು ಪ್ರಪಂಚದಲ್ಲಿ ಯಾರಿಗೂ ಗೊತ್ತಿಲ್ಲ. ಭಗವಾನುವಾಚ ನಿಮಗೆ ರಾಜಯೋಗವನ್ನು ಕಲಿಸಿ ನರನಿಂದ ನಾರಾಯಣನನ್ನಾಗಿ ಮಾಡುತ್ತೇನೆ. ಈ ಯೋಗ ಪ್ರಸಿದ್ಧವಾಗಿದೆ. ಮನುಷ್ಯರು ವಿನಾಶಿ ಧನದ ದಾನ-ಪುಣ್ಯ ಮಾಡುವುದರಿಂದ ರಾಜ ಮನೆತನದಲ್ಲಿ ಉತ್ತಮ ಜನ್ಮ ಪ್ರಾಪ್ತಿಯಾಗುತ್ತದೆ ಆದರೆ ಇಲ್ಲಿ ನೀವು 21 ಜನ್ಮಗಳ ಆಸ್ತಿಯನ್ನು ಪಡೆಯುತ್ತಿದ್ದೀರಿ. ನೀವು ತಮ್ಮದೆಲ್ಲವನ್ನು 21 ಜನ್ಮಗಳಿಗೆ ದಾನ ಮಾಡುತ್ತಿದ್ದೀರಿ ನಂತರ ನೀವು ಪದವಿ ಪಡೆಯಲು ಯಾವ ಪುರುಷಾರ್ಥವನ್ನೂ ಮಾಡಬೇಕಾಗಿಲ್ಲ. ಪದವಿ ನಿಗದಿಯಾಗುತ್ತದೆ. ಈಗ ನೀವು ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೀರಿ ಆದುದರಿಂದ ನೀವು ಶ್ರದ್ಧೆಯಿಂದ ಓದಿದರೆ ಜನ್ಮ-ಜನ್ಮಾಂತರ ರಾಜರಾಗುತ್ತೀರೆಂದು ತಂದೆಯು ತಿಳಿಸುತ್ತಾರೆ. ಮೊದಲನೆಯ ಜನ್ಮದಲ್ಲಿಯೇ ಶ್ರೇಷ್ಠ ಜನ್ಮ ಸಿಗುತ್ತದೆ. ಪ್ರಜೆಗಳಲ್ಲಿಯೂ ಸಹ ಶ್ರೇಷ್ಠ ಪದವಿ ಸಿಗುತ್ತದೆ. ರಾಜ್ಯಭಾಗ್ಯದಲ್ಲಿ ದಾಸ-ದಾಸಿ ಮೊದಲಾದವರು ಬೇಕಾಗುತ್ತದೆ. ಎಷ್ಟೆಷ್ಟು ಅಧ್ಯಯನ ಮಾಡಿ ಮಹಾದಾನಿಗಳಾಗುತ್ತೀರಿ ಅಷ್ಟು ಶ್ರೇಷ್ಠ ಪದವಿ ಸಿಗುತ್ತದೆ. ಈ ತಂದೆಯೂ ಸಹ ಮಹಾದಾನಿಯಾಗಿದ್ದಾರೆ. ಎಲ್ಲರನ್ನೂ ಶ್ರೀಮಂತರನ್ನಾಗಿ ಮಾಡುತ್ತಾರೆ ಹಾಗೂ ಎಲ್ಲರಿಗೂ ಸುಖ-ಶಾಂತಿಯ ಆಸ್ತಿಯನ್ನು ಕೊಡುತ್ತಾರೆ. ಮೊಟ್ಟ ಮೊದಲು ಎಲ್ಲರೂ ಈ ಸೃಷ್ಟಿಯಲ್ಲಿ ಸುಖದಲ್ಲಿಯೇ ಬರುತ್ತಾರೆ. ಕ್ರಿಶ್ಚಿಯನ್ನರಿಗಾಗಿ ಈ ರೀತಿ ಹೇಳುತ್ತಾರೆ... ಅವರು ಮೊದಲು ಕಾಡಿನಲ್ಲಿದ್ದು ಎಲೆಗಳ ವಸ್ತ್ರಗಳನ್ನು ತೊಡುತ್ತಿದ್ದರು. ವಿಕಾರದ ದೃಷ್ಟಿ ಇರಲಿಲ್ಲ. ಎಲ್ಲರೂ ಸುಖದಲ್ಲಿದ್ದರು, ಏಕೆಂದರೆ ಧರ್ಮದ ಆದಿ ಸಮಯವು ಸತೋಪ್ರಧಾನವಾಗಿದ್ದು ನಂತರ ರಜೋ-ತಮೋ ಸ್ಥಿತಿಯಲ್ಲಿ ಬರುತ್ತಾರೆ. ಅವರ ಪಾತ್ರ ಅವರದಾಗಿದೆ, ನಮ್ಮ ಪಾತ್ರ ನಮ್ಮದಾಗಿದೆ. ಯಾರು ಈ ಧರ್ಮದವರಾಗಿರುತ್ತಾರೆ, ಅವರು ಬಂದು ಸೇರಿಕೊಳ್ಳುತ್ತಾರೆ. ನೀವು ಯಾವಾಗ ಸಂಪೂರ್ಣ ಆಗುತ್ತೀರಿ ಆಗ ಯಾರು ನಮ್ಮ ಧರ್ಮದವರೇ ಅಥವಾ ಅಲ್ಲವೇ ಎಂದು ತಿಳಿದುಕೊಳ್ಳುತ್ತೀರಿ.

ಬಾಬಾ ಹೊಸ ಪ್ರಪಂಚವನ್ನು ರಚಿಸುವುದಾದರೆ ಭಾರತಕ್ಕೆ ಮಾತ್ರ ಆಸ್ತಿ ಸಿಕ್ಕಿತ್ತು ನಂತರ ಕಳೆದುಕೊಂಡಿದೆ ಎಂದು ನೀವು ಮಕ್ಕಳು ಎಲ್ಲರಿಗೂ ತಿಳಿಸಿಕೊಡುತ್ತೀರಿ. ಡ್ರಾಮಾನುಸಾರ ಆಸ್ತಿಯನ್ನು ತೆಗೆದುಕೊಳ್ಳಲೂಬೇಕು ಹಾಗೂ ಕಳೆದುಕೊಳ್ಳಲೂಬೇಕು. ಹೀಗೆ ಈ ಚಕ್ರವು ಸುತ್ತುತ್ತಿರುತ್ತದೆ. ಈ ಸಮಯದಲ್ಲಿ ನಾವು ಆಸ್ತಿಯನ್ನು ಕಳೆದುಕೊಂಡಿದ್ದೇವೆ, ಈಗ ಪುನಃ ತೆಗೆದುಕೊಳ್ಳುತ್ತಿದ್ದೇವೆ. ಲಕ್ಷ್ಮೀ-ನಾರಾಯಣರ ರಾಜ್ಯದ ಬಗ್ಗೆ ಯಾರಿಗೂ ಗೊತ್ತಿಲ್ಲ ಆದುದರಿಂದ ಲಕ್ಷ್ಮೀ-ನಾರಾಯಣರಿಗೆ ಈ ರಾಜ್ಯ ಯಾವಾಗ ಹೇಗೆ ದೊರೆಯಿತೆಂದು ಕೇಳಲಾಗುತ್ತದೆ. ಅವರು ಕೃಷ್ಣನನ್ನು ಮುಂದಿಟ್ಟು ಲಕ್ಷ್ಮೀ-ನಾರಾಯಣನ ಹೆಸರಿಲ್ಲದಂತೆ ಮಾಡಿದ್ದಾರೆ ಹಾಗೂ ನಾವು ಲಕ್ಷ್ಮೀ-ನಾರಾಯಣನನ್ನು ಮುಂದಿಟ್ಟು ಕೃಷ್ಣನ ಹೆಸರಿಲ್ಲದಂತೆ ಮಾಡುತ್ತೇವೆ. ಲಕ್ಷ್ಮೀ-ನಾರಾಯಣರು ಸತ್ಯಯುಗದಲ್ಲಿರುತ್ತಾರೆ. ನಾನು ಸಂಗಮದಲ್ಲಿ ಬರುತ್ತೇನೆಂದು ತಂದೆಯು ಹೇಳುತ್ತಾರೆ. ಲಕ್ಷ್ಮೀ-ನಾರಾಯಣರು ಅಗತ್ಯವಾಗಿ ಅವರ ಹಿಂದಿನ ಜನ್ಮದ ಸಂಗಮದಲ್ಲಿ ರಾಜ್ಯ ಪಡೆದುಕೊಂಡಿದ್ದಾರೆ. ಲಕ್ಷ್ಮೀ-ನಾರಾಯಣರೇ 84 ಜನ್ಮಗಳನ್ನು ಪಡೆದು ಈಗ ಅಂತಿಮ ಜನ್ಮದಲ್ಲಿದ್ದಾರೆ. ಲಕ್ಷ್ಮೀ-ನಾರಾಯಣರಿಗೆ ರಾಜ್ಯ ಕೊಡುವವರು ಅಗತ್ಯವಾಗಿ ಯಾರಾದರೂ ಇರಬೇಕಲ್ಲವೇ! ಹಾಗಾದರೆ ಭಗವಂತನೇ ಕೊಟ್ಟಿರಬೇಕು. ಈ ಸಮಯದಲ್ಲಿ ನೀವು ಸಂಪೂರ್ಣವಾಗಿ ಬಡವರಾಗಿದ್ದು ಮತ್ತೆ ನೀವು ರಾಜಕುಮಾರ ಆಗುತ್ತೀರಿ. ರಾಜಕುಮಾರನ ಜನ್ಮ ಅಗತ್ಯವಾಗಿ ರಾಜ-ಮಹಾರಾಜನ ಬಳಿ ಆಗುತ್ತದೆ. ಇದುವರೆಗೂ ಕೆಲವು ಉತ್ತಮ ರಾಜರಿದ್ದು

ಅವರಿಗೆ ಪ್ರಜೆಗಳ ಮೇಲೆ ಬಹಳ ಪ್ರೀತಿಯಿರುತ್ತದೆ. ಈಗ ನಾವು ರಾಜಯೋಗವನ್ನು ಕಲಿತು ರಾಜ್ಯಭಾಗ್ಯವನ್ನು ಪಡೆಯುತ್ತೇವೆಂದು ನೀವು ತಿಳಿದುಕೊಂಡಿದ್ದೀರಿ ಏಕೆಂದರೆ ಇದು ಅನಾದಿ ನಾಟಕವಾಗಿರುವ ಕಾರಣ ನಿಮಗೆ ಈ ನಿಶ್ಚಯವಿದೆ. ಇದು ಸೋಲು-ಗೆಲುವಿನ ನಾಟಕವಾಗಿದೆ. ಈ ನಾಟಕದಲ್ಲಿ ಏನು ನಡೆಯುತ್ತಿದೆ ಅದು ಯಥಾರ್ಥವಾಗಿದೆ. ಈ ನಾಟಕದ ರಚನೆಕಾರನಿಗೆ ಈ ನಾಟಕದ ಇಷ್ಟವಾಗುವುದಿಲ್ಲವೇನು! ಅಗತ್ಯವಾಗಿ ಇಷ್ಟವಾಗುತ್ತದೆ. ಹೀಗೆ ಆ ರಚಯಿತನ ಮಕ್ಕಳಿಗೂ ಸಹ ಇದು ಇಷ್ಟವಾಗುತ್ತದೆ. ನಾವು ಯಾರೊಂದಿಗೂ ತಿರಸ್ಕಾರ ಮಾಡಬಾರದು ಏಕೆಂದರೆ ನಾಟಕದಲ್ಲಿ ಭಕ್ತಿಯ ಪಾತ್ರವಿದೆ ಎಂದು ತಿಳಿದುಕೊಂಡಿದ್ದೀರಿ. ನಾಟಕವೆಲ್ಲವೂ ಬಹಳ ಸುಂದರವಾಗಿದೆ. ಇದನ್ನು ಅಶುಭ ಆಟವೆಂದು ಏಕೆ ಹೇಳಬೇಕು! ಬುದ್ಧಿಯಲ್ಲಿರುವ ನಾಟಕದ ರಹಸ್ಯವನ್ನು ನಿಮಗೆ ತಿಳಿಸುತ್ತಿದ್ದೇವೆ. ಈಗ ಭಕ್ತಿಯ ಪಾತ್ರ ಸಮಾಪ್ತಿಯಾಗುತ್ತದೆ. ಈಗ ನೀವು ಪುರುಷಾರ್ಥ ಮಾಡಿ ತಂದೆಯಿಂದ ಆಸ್ತಿಯನ್ನು ತೆಗೆದುಕೊಳ್ಳಬೇಕು. ಇದೆಲ್ಲವೂ ಆಸುರಿ ಸಂಪ್ರದಾಯವಾಗಿದೆ ಆದುದರಿಂದ ಇಲ್ಲಿ ತಿರಸ್ಕಾರ ಮಾಡುವ ಯಾವ ಮಾತೂ ಇಲ್ಲವೆಂದು ತಂದೆಯು ಹೇಳುತ್ತಾರೆ. ಈಶ್ವರೀಯ ಸಂಪ್ರದಾಯ ಹಾಗೂ ಆಸುರಿ ಸಂಪ್ರದಾಯದ ಆಟವಾಗಿದೆ ಆದರೆ ಅವರು ತಮ್ಮನ್ನು ದುಃಖಿಗಳೆಂದು ತಿಳಿದುಕೊಳ್ಳುವುದಿಲ್ಲ. ಅವರು ಭಕ್ತಿಯನ್ನು ಮಾಡುತ್ತಾ ಒಂದು ದಿನ ಭಗವಂತನು ಭಕ್ತಿಯ ಫಲವನ್ನು ಕೊಡಲು ಬರುತ್ತಾರೆಂದು ತಿಳಿದುಕೊಳ್ಳುತ್ತಾರೆ. ಹೀಗೆ ಮನೆಯಲ್ಲಿ ಕುಳಿತೇ ಯಾವುದಾದರೂ ರೂಪದಲ್ಲಿ ಭಗವಂತನು ಬಂದು ನಮ್ಮನ್ನು ಮಿಲನ ಮಾಡುತ್ತಾರೆಂದು ಅವರು ತಿಳಿದುಕೊಳ್ಳುತ್ತಾರೆ ಹಾಗೂ ಸನ್ಯಾಸಿಗಳು ನಿರ್ವಾಣದಲ್ಲಿ ಹೋಗುತ್ತೇವೆಂದು ತಿಳಿದುಕೊಳ್ಳುತ್ತಾರೆ. ತಮ್ಮದೇ ಸಾಧನೆಯಿಂದ ತತ್ವದೊಂದಿಗೆ ಸಂಬಂಧವನ್ನು ಜೋಡಿಸುತ್ತಾ ನಾವು ಲೀನವಾಗುತ್ತೇವೆಂದು ತಿಳಿದುಕೊಳ್ಳುತ್ತಾರೆ. ಹೀಗೆ ಪ್ರಪಂಚದಲ್ಲಿ ಅನೇಕ ಮತಗಳಿವೆ, ಆಗ ತಂದೆಯು ಬಂದು ಒಂದೇ ಮತವನ್ನು ಮಾಡುತ್ತಾರೆ. ಈ ನಾಟಕವು ಬಹಳ ಸುಂದರವಾಗಿ ಅನಾದಿಯಾಗಿ ಮಾಡಲ್ಪಟ್ಟಿದೆಯೆಂದು ತಿಳಿಸುತ್ತಾರೆ ಹಾಗೂ ಈ ಬೇಹದ್ದಿನ ನಾಟಕವು ಸುಖ-ದುಃಖದ ರೂಪದಲ್ಲಿ ಮಾಡಿರುವುದನ್ನು ನೋಡಿ ಬಹಳ ಖುಷಿಯಾಗುತ್ತದೆ. ಈ ಬೇಹದ್ದಿನ ನಾಟಕವು ತುಂಬಾ ಸುಂದರವಾಗಿ ಮಾಡಲ್ಪಟ್ಟಿದೆ ಆದುದರಿಂದ ಈ ನಾಟಕವು ಎಲ್ಲರಿಗೂ ಇಷ್ಟವಾಗಬೇಕು. ಇಲ್ಲಿ ಹಗಲು ಹಾಗೂ ರಾತ್ರಿಯೆರಡೂ ಸಹ ಚೆನ್ನಾಗಿದೆ, ಇದು ಆಟವಾಗಿದೆಯಲ್ಲವೇ. ಈಗ ರಾತ್ರಿ ಪೂರ್ಣವಾಗಿ ನಾವು ಹಗಲಿನಲ್ಲಿ (ಸ್ವರ್ಗದಲ್ಲಿ) ಉತ್ತಮವಾದ ಪದವಿಯನ್ನು ತೆಗೆದುಕೊಳ್ಳಬೇಕು. ನಾಟಕದಲ್ಲಿ ಸಿಕ್ಕಿರುವ ಪಾತ್ರವನ್ನು ಮಾಡಲೇ ಬೇಕಾಗಿರುವುದರಿಂದ ಬೇಸರವಾಗಬಾರದು. ಇದು ಬಹಳ ಉನ್ನತವಾಗಿರುವ ನಾಟಕವಾಗಿರುವ ಕಾರಣ ಇದನ್ನೆಂದಿಗೂ ಅಶುಭವೆಂದು ಹೇಳಲಾಗುವುದಿಲ್ಲ. ಈ ಆಟ ಬಹಳ ಉತ್ತಮವಾಗಿದೆ, ಇದು ಎಂದಿಗೂ ಕೊನೆಗೊಳ್ಳುವುದಿಲ್ಲ. ಇದನ್ನು ತಿಳಿದುಕೊಂಡು ನಿಮ್ಮ ಬುದ್ಧಿಯು ಈಗ ಜ್ಞಾನದಿಂದ ಸಂಪನ್ನವಾಗಿದೆ. ತಂದೆಯಂತೆ ಮಕ್ಕಳು ಜ್ಞಾನಪೂರ್ಣರಾಗಿದ್ದಾರೆ. ಸುಖ ಹಾಗೂ ದುಃಖ ಎಷ್ಟೆಷ್ಟು ಸಮಯ ತೆಗೆದುಕೊಳ್ಳುತ್ತೇವೆಂದೂ ಸಹ ನೀವು ತಿಳಿದುಕೊಂಡಿದ್ದೀರಿ ಆದ್ದರಿಂದ ನೀವು ಹೇ ಪ್ರಭು ನಿನ್ನ ಲೀಲೆ ಅಪರಮಪಾರ! ವೆಂದು ಹೇಳುತ್ತೀರಿ. ಪ್ರಭುವಿನ ಮಕ್ಕಳು ಅವಶ್ಯವಾಗಿ ಚೆನ್ನಾಗಿರಬೇಕು. ಅದನ್ನು ಸರಿಯಿಲ್ಲವೆಂದು ಯಾರು ಹೇಳುತ್ತಾರೆ. ನಾಟಕದಲ್ಲಿ ಸಿಕ್ಕಿರುವ ಪಾತ್ರವನ್ನು ಅಭಿನಯಿಸಲೇಬೇಕು. ಈ ನಾಟಕವು ಎಂದಿಗೂ ಕೊನೆಗೊಳ್ಳುವುದಿಲ್ಲ, ಇಂತಹ ನಾಟಕವನ್ನು ತಿಳಿಯುವುದರಿಂದ ಬಹಳ ಮಜವೆನಿಸುತ್ತದೆ. ಭಕ್ತಿಯಲ್ಲಿ ಸತ್ಯಯುಗದ ರಾಜ್ಯದ ಬಗ್ಗೆ ಗೊತ್ತೇ ಇಲ್ಲ. ಅದೇರೀತಿ ಸತ್ಯಯುಗದಲ್ಲಿ ಭಕ್ತಿಯ ಬಗ್ಗೆ ಗೊತ್ತಿರುವುದಿಲ್ಲ. ಹೇ ಪ್ರಭು ನಿನ್ನ ಲೀಲೆ ಎಷ್ಟೊಂದು ವಿಚಿತ್ರ!ವಾಗಿದೆಯೆಂದು ಭಕ್ತಿಯಲ್ಲಿ ಬಹಳ ಸುಂದರವಾದ ಹಾಡುಗಳನ್ನು ಹಾಡುತ್ತಾರೆ. ಪ್ರಭುವಿನ ಲೀಲೆಯನ್ನು ನಿಮ್ಮ ವಿನಃ ಮತ್ಯಾರೂ ತಿಳಿದುಕೊಂಡಿಲ್ಲ. ತಂದೆಯಿಂದ ನಮಗೆ ಎಷ್ಟೊಂದು ಆಸ್ತಿಯು ಸಿಗುತ್ತಿದೆ. ಇದು ಎಂತಹ ವಿಚಿತ್ರವಾದ ನಾಟಕವೆಂದು ಇಡೀ ದಿನ ಬುದ್ಧಿಯಲ್ಲಿ ವಿಚಾರ ಮಾಡಬೇಕು. ಈ ನಾಟಕದ ತಿಳಿವಳಿಕೆಯೂ ಸಹ ಬಹಳ ವಿಚಿತ್ರವಾಗಿದೆ. ತಂದೆಯ ಲೀಲೆಯು ಎಷ್ಟೊಂದು ಸುಂದರವಾಗಿದೆ. ನೀವು ಈ ಬೇಹದ್ದಿನ ನಾಟಕವನ್ನು ತಿಳಿದುಕೊಡಿದ್ದೀರಿ ಹಾಗೂ ಮನುಷ್ಯರು ನಾಟಕವನ್ನು ನೋಡಿ ಖುಷಿಯಾಗುವಂತೆ ನೀವು ಈ ನಾಟಕದಲ್ಲಿ ನಿಮ್ಮ ಪಾತ್ರವನ್ನು ನೋಡಿ ಖುಷಿ ಪಡುತ್ತೀರಿ. ಅಲ್ಲಿ ಭಿನ್ನ-ಭಿನ್ನವಾದ ನಾಟಕಗಳಿರುತ್ತವೆ ಆದರೆ ಇಲ್ಲಿ ಒಂದೇ ನಾಟಕವಾಗಿದೆ. ಈ ನಾಟಕವನ್ನು ತಿಳಿದುಕೊಳ್ಳುವುದರಿಂದ ನಾವು ವಿಶ್ವದ ಮಾಲೀಕರಾಗುತ್ತೇವೆ. ಇದು ಎಷ್ಟೊಂದು ಆಶ್ಚರ್ಯವಾದ ಮಾತಾಗಿದೆ. ಈ ಮಾತುಗಳನ್ನು ತಂದೆಯ ಮೂಲಕ ಕೇವಲ ನೀವು ತಿಳಿದುಕೊಡಿದ್ದೀರಿ ಹಾಗೂ ಈ ಮಾತುಗಳನ್ನು ಸ್ಮರಣೆ ಮಾಡಬೇಕಾಗಿದೆ. ಗೃಹಸ್ಥ-ವ್ಯವಹಾರದಲ್ಲಿರುತ್ತಾ 2-3 ಗಂಟೆಗಳ ಕಾಲ ನಾಟಕವನ್ನು ನೋಡಿಕೊಂಡು ಬರುತ್ತಾರೆ. ಅಲ್ಲಿ ನಾಟಕವನ್ನು ಕುರಿತು ಯಾರನ್ನೂ ಸಹ ಕೇಳುವುದಿಲ್ಲವಲ್ಲವೇ? ಏಕೆಂದರೆ ಈ ನಾಟಕ ಏನೆಂದು ಬುದ್ಧಿಯಲ್ಲಿರುತ್ತದೆ. ಹಾಗೆಯೇ ಇದು ಬೇಹದ್ದಿನ ನಾಟಕವಾಗಿದೆ ಆದ್ದರಿಂದ ಇದನ್ನು ಏಕೆ ಮರೆಯಬೇಕು! ಈ ಚಕ್ರದ ಜ್ಞಾನವಂತೂ ಬಹಳ ಸಹಜವಾಗಿದೆ. ಅಲ್ಲದೆ ಈ ನಾಟಕವನ್ನು ಯಾರೂ ತಿಳಿದುಕೊಂಡಿಲ್ಲ. ನೀವು ಬುದ್ಧಿಯಿಂದ ತಿಳಿದುಕೊಂಡು ನಂತರ ದಿವ್ಯ ದೃಷ್ಟಿಯಿಂದ ನೋಡುತ್ತೀರಿ. ಮುಂದೆ ಸಮಯ ಬರುತ್ತಾ ನೀವು ಬಹಳ ದೃಶ್ಯಗಳನ್ನು ನೋಡುತ್ತೀರಿ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ತಂದೆಯ ಸಮಾನ ಮಹಾದಾನಿಯಾಗಬೇಕು. ಎಲ್ಲರಿಗೂ ಸುಖ-ಶಾಂತಿಯ ಆಸ್ತಿಯನ್ನು ಕೊಡಬೇಕು. ಜ್ಞಾನವನ್ನು ಧಾರಣೆ

ಮಾಡಿ ನಂತರ ಮನನ ಮಾಡಬೇಕು.

2. ಬೇಹದ್ದಿನ ನಾಟಕವನ್ನು ನೋಡಿ ಸದಾ ಖುಷಿಯಾಗಬೇಕು. ಪ್ರಭುವಿನ ಲೀಲೆ ಹಾಗೂ ಈ ವಿಚಿತ್ರ ನಾಟಕವನ್ನು ಸ್ಮರಣೆ ಮಾಡುತ್ತಾ ಮಜದಲ್ಲಿರಬೇಕು.

ವರದಾನ: ಪುರುಷಾರ್ಥದ ಜೊತೆಗೆ ಯೋಗದ ಪ್ರಯೋಗದ ವಿಧಿಯ ಮೂಲಕ ವೃತ್ತಿಗಳನ್ನು ಪರಿವರ್ತನೆಗೊಳಿಸುವ ಸದಾ ವಿಜಯಿ ಭವ.

ಪುರುಷಾರ್ಥವು ಧರಣಿಯನ್ನು ತಯಾರು ಮಾಡುತ್ತದೆ, ಅದೂ ಅವಶ್ಯಕತೆಯಿದೆ ಆದರೆ ಪುರುಷಾರ್ಥದ ಜೊತೆ ಜೊತೆಗೆ ಯೋಗದ ಪ್ರಯೋಗದಿಂದ ಎಲ್ಲರ ವೃತ್ತಿಗಳನ್ನು ಪರಿವರ್ತನೆ ಮಾಡುತ್ತೀರೆಂದರೆ ಸಫಲತೆಯು ಸಮೀಪ ಕಾಣಿಸುತ್ತದೆ. ಧೃಡ ನಿಶ್ಚಯ ಹಾಗೂ ಯೋಗದ ಪ್ರಯೋಗದ ಮೂಲಕ ಯಾರದೇ ಬುದ್ಧಿಯನ್ನಾದರೂ ಪರಿವರ್ತನೆ ಮಾಡಬಹುದು. ಸೇವೆಗಳಲ್ಲಿಯೂ ಯಾವಾಗ ಯಾವುದೇ ಏರುಪೇರುಗಳಾಯಿತೆಂದರೆ, ಅದರಲ್ಲಿಯೂ ಯೋಗದ ಪ್ರಯೋಗದಿಂದಲೇ ವಿಜಯವು ಸಿಗುತ್ತದೆ. ಆದ್ದರಿಂದ ಪುರುಷಾರ್ಥದಿಂದ ಧರಣಿಯನ್ನು ತಯಾರು ಮಾಡಿರಿ ಆದರೆ ಬೀಜವನ್ನು ಪ್ರತ್ಯಕ್ಷಗೊಳಿಸುವುದಕ್ಕಾಗಿ ಯೋಗದ ಪ್ರಯೋಗ ಮಾಡಿದಾಗ ವಿಜಯಿ ಭವದ ವರದಾನವು ಪ್ರಾಪ್ತಿಯಾಗುವುದು.

ಸ್ಲೋಗನ್: ಸೇವೆಯ ಮೂಲಕ ಪುಣ್ಯದ ಖಾತೆಯನ್ನು ಜಮಾ ಮಾಡುವವರೇ ಪುಣ್ಯಾತ್ಮರಾಗಿದ್ದಾರೆ.